ಶ್ರೀ ಪಟವಂಕ್ಕಿ ರತ್ನಾಕರ್.—ಅವರ ಈ ಪ್ರಶ್ನೆಯನ್ನೇ ತಾವು ಅರ್ಥ ಮಾಡಿಕೊಂಡಿಲ್ಲ. ಪ್ರಶ್ನೆಯಲ್ಲಿ ಅಂತಹ ಸಂಕೀರ್ಣವಾದುದು ಏನು ಇದೆ ?

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ಇವರು ರೈತರಿಗೆ ಸಾಲದಲ್ಲಿ ವಿನಾಯಿತಿ ಮಾಡಿದ್ದೇವೆಂದು ಘೋಷಣೆ ಮಾಡಿರತಕ್ಕದ್ದು ಈ ಸಾಲಿನಲ್ಲಿ. ಮೂರು ತಿಂಗಳಾಯಿತು. ಆರು ಕೋಟಿ ರೂಪಾಯಿಗಳನ್ನು ರಾಜ್ಯದ ರೈತರಿಗೆ ಮನ್ನಾ ಮಾಡಲಾಗಿದೆ ಎಂದು ಸರಕಾರ ಘೋಷಣೆ ಮಾಡಿದೆ. ಇದು ಯಾವಾ ಯಾವಾ ಸಾಲಕ್ಕೆ ಸಂಬಂಧಿಸಿದ್ದುದು ಹಾಗೂ ಯಾವ ಯಾವ ವರ್ಗಕ್ಕೆ ಸೇರಿದ ರೈತರಿಗೆ ಸಂಬಂಧಪಟ್ಟಿದ್ದುದು ಎಂದು ಕೇಳುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ,—ಸನ್ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿದ್ದಾರೆ. ನಾವು ಬಡ್ಡಿಯ ಸಹಾಯಧನವನ್ನು ಘೋಷಣೆ ಮಾಡಿದ್ದೇವೆ. ಯಾವುದೇ ಸಾಲವನ್ನು ಮನ್ನಾ ಮಾಡಲಾಗಿದೆ ಎಂದು ಹೇಳಿರುವುದಿಲ್ಲ. ೧೯೮೫-೮೬ನೇ ಸಾಲಿನಿಂದ ಇದುವರೆಗೆ ಬಡ್ಡಿಯ ಸಹಾಯಧನ ರೂಪದಲ್ಲಿ ರಾಜ್ಯದ ರೈತರಿಗೆ ಕೊಟ್ಟಿದ್ದೇವೆ. ೧೯೮೬-೮೭ರ ಅಂಕಿ ಅಂಶಗಳು ಇನ್ನೂ ಬಂದಿಲ್ಲ. ಇದು ಆರರಿಂದ ಒಂಭತ್ತು ಕೋಟಿಗೆ ಹೋಗುವ ನಿರೀಕ್ಷೆ ಇದೆ.

ಶ್ರೀ ಜಿ. ರಾಜೂಗೌಡ.—ಈ ರಿಯಾಯಿತಿಯನ್ನು ಯಾವ ಯಾವ ವರ್ಗದ ವರ್ಗದ ರೈತರಿಗೆ, ಯಾವ ಯಾವ ಸಹಕಾರ ಸಂಘಗಳಿಗೆ ಕೊಟ್ಟಿದ್ದೀರಿ?

ಶ್ರೀ ಹೆಚ್. ವಿಶ್ವನಾಥಯ್ಯ.—ಚಾಲ್ತಿ ಸಾಲಕ್ಕೆ ಸಂಬಂಧಪಟ್ಟಂತೆ ೧೯೮೬ ರಿಂದ ಇಲ್ಲಿವರೆಗೆ ೧೬.೮೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ದೀರ್ಘಾವಧಿ ಸಾಲಕ್ಕೆ ಸಂಬಂಧಪಟ್ಟಂತೆ ೧೬.೧೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ರೀತಿ ಕೊಟ್ಟಿದ್ದೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

## ಸಾಲರಜಂಗ್ ಸಕ್ಕರೆ ಕಾರ್ಖಾನೆಗಳ ಮಂಜೂರಾತಿ ಬಗ್ಗೆ

೮೪(೮೦) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಯಚೂರು ಜಿಲ್ಲೆಯಲ್ಲಿರುವ ಸಾಲರ್‌ಜಂಗ್ ಸಕ್ಕರೆ ಕಾರ್ಖಾನೆಗೆ ಮಂಜೂರಾಗಿರುವ ಜಮೀನೆಷ್ಟು ಇದರ ಮಾಲೀಕರಾರು?

ಆ) ಈ ಜಮಿನಿನಲ್ಲಿ ಸಕ್ಕರೆ ಕಾರ್ಖಾನೆಗೆ ಮಿಸಲಾಗಿರುವ ಜಮಿನು ಎಷ್ಟು ? ಕಬ್ಬು ಬೆಳೆಯಲು ಆಥವಾ ಬೇರೆ ಉಪಯೋಗಕ್ಕಾಗಿ ಮಿಸಲಾಗಿದ್ದ ಜಮಿನೆಷ್ಟು?

ಇ) ಈ ಕಾರ್ಖಾನೆ ನಡೆಯದೇ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಇದರಿಂದ ಎಷ್ಟು ಕಾರ್ಮಿಕರಿಗೆ ಕೆಲಸವಿಲ್ಲದಾಗಿದೆ?

ಈ) ಕಾರ್ಖಾನೆ ನಡೆಯದೆ ಇರುವುದರಿಂದ ಜಮಿನನ್ನು ಅನೇಕ ರೈತರು ವ್ಯವಸಾಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಹಾಗೂ ವ್ಯವಸಾಯ ಮಾಡುತ್ತಿರುವವರು ಆ ಜಮಿನನ್ನು ತಮಗೇ ಕೊಡಬೇಕೆಂದು ಪದೇ ಪದೇ ಮನವಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ; ರೈತರ ಸಂಘದವರೂ ಸಹ ಮನವಿ ಮಾಡಿಲ್ಲವೇ?

ಉ) ವ್ಯವಸಾಯ ಮಾಡುತ್ತಿರುವ ರೈತರಿಗೇ ಈ ಜಮಿನನ್ನು ಮಂಜೂರು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಗೆ ೧೯೭೧ ಎಕರೆ ೨೬ ಗುಂಟೆ ಜಮೀನು ಮಂಜೂರಾಗಿದೆ ಶ್ರೀ ಸುಶೀಲ ಕುಮಾರ ಮೊರಾರ್ಕ್ ಇದರ ಮಾಲೀಕರು.

ಆ) ೧೯೭೧ ಎಕರೆ ೨೬ ಗುಂಟೆ ಜಮೀನನ್ನು ಸಕ್ಕರೆ ಕಾರ್ಖಾನೆಗೆ ವಿಾಸಲಿಡಲಾಗಿದೆ. ೧೦೦೦ ಎಕರೆ ಜಮೀನನ್ನು ಕಬ್ಬು ಬೆಳೆಯಲು ವಿಾಸಲಿಡಲಾಗಿದೆ.

ಇ) ಹೌದು. ೩೬೫ ಜನ ಕಾರ್ಮಿಕರಿಗೆ ಕೆಲಸವಿಲ್ಲವಾಗಿದೆ.

ಈ) ಹೌದು.

ಉ) ಕರ್ನಾಟಕ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚನ್ಯಾಯಾಲಯಗಳು ತಡೆಯಾಜ್ಞೆ ನೀಡಿರುವುದರಿಂದ ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ.

## ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಯವರ ಬಗ್ಗೆ

೮೭(೨೦೮) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಜರಾಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಗಳ ಸಂಖ್ಯೆ ಎಷ್ಟು?

ಆ) ಇವರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ಮತ್ತು ಧರ್ಮಿ ಮಂತ್ರಿಗಳು).—

ಅ) ಒಂದು.

ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲಿರುವ ಕಲಸಗಾರರು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಮತ್ತು ವೇತನ ಶ್ರೇಣಿ ಮುಂತಾದ ಸೇವಾ ಸೌಲಭ್ಯವನ್ನು ನೀಡುವಂತೆ ಆದೇಶ ಕೋರಿ ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್‌ಅರ್ಜಿಯಿದೆ. ಈ ವಿಷಯದಲ್ಲಿ ನ್ಯಾಯಾಲಯದ ತೀರ್ಪನ್ನು ಕಾಯುತ್ತಿರಲಾಗುತ್ತಿದೆ.

## ಮೈಸೂರು ಜಿಲ್ಲೆಯಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಬಗ್ಗೆ

೯೦(೧೮೧) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ನಾಲ್ಕು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅಭಾವ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳು ಏನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಅಭಾವ ಪೀಡಿತ ಪ್ರದೇಶಗಳಲ್ಲಿ ಸರ್ಕಾರವು ಈ ಕೆಳಕಂಡ ಪರಿಹಾರ ಕ್ರಮಗಳನ್ನು ತೆಗೆದು ಕೊಳ್ಳಲು ಸಂಬಂಧಪಟ್ಟವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.